
ಆಲೋಚನಾಕ್ರಮಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಬರಹವನ್ನು ಆರಂಭಮಾಡಿದ ಜಾಹ್ನವಿಯವರು ತಮ್ಮ ಕಾಲದ ನಿರೀಕ್ಷೆಗಳಿಗೆ ಸಿದ್ಧರೂಪವನ್ನು ತೊಡದೆ ಬೇರೆಯದೇ ದಾರಿ ತುಳಿದಿರುವುದು ತುಂಬಾ ಸ್ಪಷ್ಟವಾಗಿ ಕಾಣುತ್ತದೆ.

ಇಲ್ಲಿನ ಕಥೆಗಳಿಗೆ ಒಂದು ಗತಿಯಿದೆ; ಸ್ಪಷ್ಟತೆಯಿದೆ. ತಾನು ಸಾಗಬೇಕಾದ ದಾರಿಯನ್ನು, ಅದಕ್ಕೂ ಮುಖ್ಯವಾಗಿ ದಲಿತ ಚಿಂತನೆ, ಮಹಿಳಾ ಆಲೋಚನಾಕ್ರಮದ ದಿಕ್ಕುಗಳನ್ನು ಈ ಕಥೆಗಳು ಆರಂಭದಲ್ಲಿಯೇ ಸೂಚಿಸಿವೆ. ಆ ದಾರಿಯನ್ನು ಆಯ್ದುಕೊಂಡ ಜಾಹ್ನವಿಯವರು ತಾವು ನಡೆದು ದಣಿದವರಂತೆ ಕಾಣುತ್ತಾರೆ. ಅಥವಾ ವ್ಯವಸ್ಥೆ ಮತ್ತು ಆಯ್ಕೆಯೇ ಅವರನ್ನು ದಣಿಸಿಬಿಟ್ಟಿದೆ. ಈಗಾಗಲೇ ಇದ್ದ ರೂಢಿಮಾರ್ಗದಲ್ಲಿ ಸಾಗಿದ್ದರೆ ಮಹತ್ವದ ಕಥೆಗಾರ್ತಿಯಾಗಿಅವರುಮುಂಚೂಣಿಯಲ್ಲಿರುತ್ತಿದ್ದರು. ಅದು ಜಾಹ್ನವಿಯವರಿಗೆ ಸಾಧ್ಯವಾಗಿಲ್ಲ.

ಈ ಸಂಕಲನದಲ್ಲಿ ದಲಿತ ನೆಲೆಯ ಕಥೆಗಳಿವೆ. ಹೆಣ್ಣಿನ ತುಮುಲಗಳನ್ನು ಅನಾವರಣಗೊಳಿಸುವ ಕಥೆಗಳಿವೆ. ಮನೋಚಿಕಿತ್ಸಿಕ ನೆಲೆಯ ಕಥೆಗಳಿವೆ. ಆಧುನಿಕ ಸಂಕಟಗಳ ಅಭಿವ್ಯಕ್ತಿಯಿದೆ. ಹಾದರ, ವ್ಯಭಿಚಾರದ ಪ್ರಶ್ನೆಗಳಿವೆ. ಆಜೀವಿಕ ರೂಪದ ಕಥೆಯೂ ಒಂದಿದೆ. ಒಂದೊಂದು ಕಥೆಯೂ ಭಿನ್ನಲೋಕವನ್ನೇ ತೆರೆದಿಡುತ್ತವೆ. ಕಥೆಗಳ ಶೀರ್ಷಿಕೆಗಳು ತೀರಾ ವಾಚ್ಯವಾಗಿ ಕಾಣುತ್ತವೆ. ಅವು ಆಧುನಿಕ ಪರಿಭಾಷೆಗಳಾಗಿ ಕಾಣುತ್ತವೆ ನಿಜ. ಆದರೆ ಕಥೆಗಳು ಆ ಶೀರ್ಷಿಕೆಗಳನ್ನು ಒಡೆಯುತ್ತಲೇ ಬದುಕಿನ ಅನಂತ ದರ್ಶನ ಮಾಡಿಸುತ್ತವೆ.

ಜಾಹ್ನವಿಯವರ ಕಥೆಗಳು ಅವರ ವಾರಿಗೆಯವರ ಕಥೆಗಳಿಗಿಂತ ಭಿನ್ನವಾಗಿ ನಿಲ್ಲಲು ಕಾರಣ ಅವರ ಅಭಿವ್ಯಕ್ತಿ ಮತ್ತು ಲೋಕವನ್ನು ನೋಡುವ ಕ್ರಮ. ಇವರ ಕಥೆಗಳಲ್ಲಿ ಯಾವುದೇ ಸಿದ್ಧಾಂತಗಳು, ಹೊರಗಿನಿಂದ ಹೇರಿಕೊಂಡಿರುವ ಫೆಮಿನಿಸಂ ಥಿಯರಿಗಳಿಲ್ಲ. ಜಾಹ್ನವಿಯವರ ಕಥನದಲ್ಲಿ ಮಹಿಳಾ ನೋಟವೆಂದರೆ ಹೊರಗಿನಿಂದ ಹೇರಿಕೊಳ್ಳುವಂತಹದ್ದಲ್ಲ, ತಮ್ಮ ಬದುಕಿನ ಸುತ್ತಲೇ ನಡೆಯುವ ವಿದ್ಯಮಾನಗಳಿಂದ ಕಟ್ಟಿಕೊಳ್ಳುವಂತಹದ್ದು. ಕೂಲಿ ಮಾಡುವ, ಜೀತಕ್ಕಿರುವ, ಅನಕ್ಷರಸ್ಥರ, ಬಸವಿಪದ್ಧತಿಯ ಕೂಪಕ್ಕೆ




ಒಬ್ರು ಸುದ್ಯಾಕೆ... ಒಬ್ರು ಗದ್ಲ್ಯಾಕೆ...
ಲೇ: ಬಿ.ಟಿ. ಜಾಹ್ನವಿ
ಪು: 336; ಬೆ: ₹ 350
ಪ್ರ: ಕೌದಿ ಪ್ರಕಾಶನ, ಆನೇಕಲ್.
ಫೋನ್: 93806 97082